# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 564 |
| ಸದಸ್ಯರ ಹೆಸರು | : | ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 17.12.2021 |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ) ಮಳೆಹಾನಿ ಮತ್ತು ಪ್ರಕೃತಿ ವಿಕೋಪದಿಂದ ರೈತರು ಬೆಳೆದ ಬೆಳೆಗಳು ಹಾಳದಲ್ಲಿ ಸರ್ಕಾರದಿಂದ ರೈತರಿಗೆ ದೊರೆಯುತ್ತಿರುವ ಪರಿಹಾರಗಳೇನು; (ವಿವರ ನೀಡುವುದು)</td><td>ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನ್ವಯ ಪ್ರಕೃತಿ ವಿಕೋಪದಿಂದ ಶೇ.33ರಷ್ಟಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬೆಳೆ ಹಾನಿ ಉಂಟಾದಲ್ಲಿ ಇನ್‌ಪುಟ್ ಸಬ್ಸಿಡಿಯನ್ನು ಪ್ರತಿ ಫಲಾನಿಭವಿಗಳಿಗೆ ಗರಿಷ್ಟ 2 ಹೆಕ್ಟೇರ್‌ಗೆ ಸೀಮಿತ ಗೊಳಿಸಿ ಈ ಕೆಳಕಂಡ ದರದಲ್ಲಿ (ಪ್ರತಿ ಹೆಕ್ಟೇರ್‌ಗೆ) ಪಾವತಿಸಲಾಗುತ್ತದೆ:<br><table><tr><td>ಮಳೆಯಾಶ್ರಿತ</td><td>ರೂ.6800/-</td></tr><tr><td>ನೀರಾವರಿ</td><td>ರೂ.13,500/-</td></tr><tr><td>ಬಹುವಾರ್ಷಿಕ</td><td>ರೂ.18,000/-</td></tr></table></td></tr>
<tr><td>(ಆ) ಈ ರೀತಿಯ ಬೆಳೆ ನಷ್ಟದಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ತೊಂದರೆಗೊಳಗಾಗಿರುವ ರೈತರೆಷ್ಟು; ಮತ್ತು ನಷ್ಟದ ಪ್ರಮಾಣವೆಷ್ಟು; ಹಾಗೂ ಇವರಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಪರಿಹಾರವೆಷ್ಟು; (ತಾಲ್ಲೂಕುವಾರು ಮತ್ತು ಫಲಾನುಭವಿವಾರು ಮಾಹಿತಿ ನೀಡುವುದು)</td><td>ಚಿಕ್ಕಮಗಳೂರು ಜಿಲ್ಲೆಯಲ್ಲಿ 2019 ನೇ ಸಾಲಿನ ಪ್ರವಾಹದಿಂದ 34,061 ಹೆಕ್ಟೇರ್ ಬೆಳೆ ಹಾನಿಯಾಗಿದ್ದು, ನಿಯಮಾನುಸಾರ ಅರ್ಹರಿರುವ 31,672 ಫಲಾನುಭವಿಗಳಿಗ ರೂ.66.89 ಕೋಟಿ, 2020 ನೇ ಸಾಲಿನ ಪ್ರವಾಹದಿಂದ 12,214 ಹೆಕ್ಟೇರ್ ಬೆಳೆ ಹಾನಿಯಾಗಿದ್ದು, ನಿಯಮಾನುಸಾರ ಅರ್ಹರಿರುವ 19,045 ಫಲಾನುಭವಿಗಳಿಗ ರೂ.29.05 ಕೋಟಿ ಹಾಗೂ 2021 ನೇ ಸಾಲಿನ ಪ್ರವಾಹದಿಂದ 47,326 ಹೆಕ್ಟೇರ್ ಬೆಳೆ ಹಾನಿಯಾಗಿದ್ದು, ಇಲ್ಲಿಯವರೆಗೆ ನಿಯಮಾನುಸಾರ ಅರ್ಹರಿರುವ 28,775 ಫಲಾನುಭವಿಗಳಿಗ ರೂ.34.30 ಕೋಟಿ ಇನ್‌ಪುಟ್ ಸಬ್ಸಿಡಿ ಹಣವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ.<br>ಫಲಾನುಭವಿವಾರು ವಿವರ https://parihara.karnataka.gov.in ಜಾಲತಾಣದಲ್ಲಿ ಲಬ್ಯವಿದೆ.</td></tr>
<tr><td>(ಇ) ಕಳೆದ 3 ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಧಾನಮಂತ್ರಿ ಸುರಕ್ಷಾ ಫಸಲ್ ಭೀಮಾ ಯೋಜನೆಯಡಿ ವಿಮೆ ಮಾಡಿಸಲು ಅರ್ಜಿ ಸಲ್ಲಿಸಿರುವ ರೈತರೆಷ್ಟು; ಅರ್ಜಿ ಸಲ್ಲಿಸಿ ವಿಮೆ ಪಡೆದ ರೈತರೆಷ್ಟು ಮತ್ತು ಅವರು ಪಡೆದಿರುವ ವಿಮೆ ಮೊತ್ತದ ವಿವರಗಳನ್ನು ತಾಲ್ಲೂಕುವಾರು ಮತ್ತು ಫಲಾನುಭವಿವಾರು ನೀಡುವುದು;</td><td>ಕೃಷಿ ಇಲಾಖೆಯ ವರದಿಯನುಸಾರ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಕೆಳಕಂಡಂತೆ ರೈತರು ವಿಮಾ ಮೊತ್ತ ಪಡೆದಿದ್ದಾರೆ:<br>2018 ಮುಂಗಾರು ಅವಧಿಯಲ್ಲಿ 1085 ರೈತರಿಗೆ ರೂ.25.37 ಲಕ್ಷ<br>2018 ಹಿಂಗಾರು ಅವಧಿಯಲ್ಲಿ 70 ರೈತರಿಗೆ ರೂ.3.52 ಲಕ್ಷ<br>2019 ಮುಂಗಾರು ಅವಧಿಯಲ್ಲಿ 6333 ರೈತರಿಗೆ ರೂ.297.85 ಲಕ್ಷ<br>2019 ಹಿಂಗಾರು ಅವಧಿಯಲ್ಲಿ 5 ರೈತರಿಗೆ ರೂ.0.13 ಲಕ್ಷ<br>2020 ಮುಂಗಾರು ಅವಧಿಯಲ್ಲಿ 1793 ರೈತರಿಗೆ ರೂ.71.90 ಲಕ್ಷ</td></tr>
</table>

| | |
|---|---|
| (ಈ) ಪ್ರಧಾನಮಂತ್ರಿ ಸುರಕ್ಷಾ ಫಸಲ್ ಭೀಮಾ ಯೋಜನೆಯಡಿ ಅರ್ಜಿ ಸಲ್ಲಿಸಯೂ ವಿಮೆ ಪಡೆಯದ ರೈತರೆಷ್ಟು; ವಿಮೆ ಮೊತ್ತ ನೀಡದಿರುವುದಕ್ಕೆ ಕಾರಣಗಳೇನು? (ಸಂಪೂರ್ಣ ವಿವರ ನೀಡುವುದು) | ಕೃಷಿ ಇಲಾಖೆಯ ಮೂಲಕ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ 2018-19ನೇ ಸಾಲಿನಲ್ಲಿ ಎಲ್ಲಾ ಅರ್ಹ ರೈತ ಫಲಾನುಭವಿಗಳಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸಲಾಗಿರುತ್ತದೆ.<br>2019-20 ಮತ್ತು 2020-21ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿಯೂ ಒಟ್ಟು 160 ರೈತ ಫಲಾನುಭವಿಗಳಿಗೆ ವಿಮಾ ಸಂಸ್ಥೆಯವರಿಂದ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸಲು ಬಾಕಿ ಇರುತ್ತದೆ.<br>2019-20 ನೇ ಸಾಲಿನಿಂದ ರೈತರಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸುವ ಪ್ರಕ್ರಿಯೆಯನ್ನು ರಾಷ್ಟ್ರದಲ್ಲೇ ಪ್ರಥಮ ಬಾರಿಗೆ ಸಂರಕ್ಷಣೆ ತಂತ್ರಾಂಶದ ಮುಖಾಂತರವೇ ರೈತ ಆಧಾರ್ ಸಂಖ್ಯೆ ಲಿಂಕ್ ಆದ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (Direct Beneficiary Transfer) ಕೈಗೊಳ್ಳಲಾಗಿದ್ದು, ಈ ವಿಧಾನದಲ್ಲಿ ಅರ್ಹ ಫಲಾನುಭವಿಗಳಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸುವುದರಿಂದ ಪಾರದರ್ಶಕತೆ ಮತ್ತು ನೈಜ ಸಮಯದ ಪಾವತಿಯ ಸ್ಥಿತಿ ದೊರಕುತ್ತದೆ. ಈ ಪ್ರಕ್ರಿಯೆಯಂತೆ ವಿಮಾ ಸಂಸ್ಥೆಯವರು ವಿಮಾ ಪರಿಹಾರವನ್ನು ಇತ್ಯರ್ಥಪಡಿಸುತ್ತಿದ್ದಾರೆ.<br>ನೊಂದಣಿ ಪ್ರಕ್ರಿಯೆಯಲ್ಲಿ ಸರಿಯಾದ ಆಧಾರ್ ಸಂಖ್ಯೆಯನ್ನು ನಮೂದಿಸದೇ ಇರುವುದರಿಂದ, ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸುವ ಸಂದರ್ಭದಲ್ಲಿ In active Aadhar/ NPCI validation failed/Aadhar & account mismatch ಎಂಬ ಕಾರಣಗಳಿಂದ ಬೆಳೆ ವಿಮೆ ಪರಿಹಾರ ಮೊತ್ತವನ್ನು ವಿಮೆ ಸಂಸ್ಥೆಯವರು ರೈತರಿಗೆ ಪಾವತಿಸಲು ಸಾಧ್ಯವಾಗುತ್ತಿಲ್ಲ.<br>ಮೇಲೆ ತಿಳಿಸಿರುವ ಸಮಸ್ಯೆಗಳು ಬಗೆಹರಿದಂತೆ, ಹಂತ ಹಂತವಾಗಿ ಬೆಳೆ ವಿಮೆ ಪರಿಹಾರ ಮೊತ್ತವನ್ನು ಅನುಷ್ಠಾನ ವಿಮಾ ಸಂಸ್ಥೆಯವರು ಇತ್ಯರ್ಥಪಡಿಸುತ್ತಿದ್ದಾರೆ. |

ಕಂಇ 603 ಟಿಎನ್ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು